2021 ಕ.ತೀ.ವ 1370

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಮೊಹಮ್ಮದ್ ಶಮೀರ್ –ವಿರುದ್ಧ– ಕರ್ನಾಟಕ ಸರ್ಕಾರ,
ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಇನ್ನೊಬ್ಬರು*

ದಂಡ ಪ್ರಕ್ರಿಯಾ ಸಂಹಿತೆ 401ನೇ ಪ್ರಕರಣವನ್ನು ಓದಿಕೊಂಡು 397ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ ಕ್ರಿಮಿನಲ್ ಪರಿಷ್ಕರಣಾ ಅರ್ಜಿ.

ದಂಡ ಪ್ರಕ್ರಿಯಾ ಸಂಹಿತೆಯ 451 ಹಾಗೂ 457ನೇ ಪ್ರಕರಣ

ಅಧಿವಿಚಾರಣಾ ನ್ಯಾಯಾಲಯದಲ್ಲಿ ವಾಹನವನ್ನು ಬಿಡಿಸಿಕೊಳ್ಳಲು ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ 451 ಹಾಗೂ 457ನೇ ಪ್ರಕರಣದ ಅಡಿಯಲ್ಲಿ ಹೂಡಿದ ಅರ್ಜಿಯನ್ನು ಪುರಸ್ಕರಿಸಿದ ಅಧಿವಿಚಾರಣಾ ನ್ಯಾಯಾಲಯವು ಅರ್ಜಿದಾರರು ತಮ್ಮ ವಾಹನ ಮೌಲ್ಯದ ದುಪ್ಪಟ್ಟು ಮೊತ್ತದ ಬ್ಯಾಂಕ್ ಶೂರಿಟಿಯನ್ನು ನೀಡಬೇಕೆಂದು ಹೊರಡಿಸಿದ ಷರತ್ತುಬದ್ಧ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಪರಿಷ್ಕರಣಾ ಅರ್ಜಿ.

ಅಧಿವಿಚಾರಣಾ ನ್ಯಾಯಾಲಯವು ಅರ್ಜಿದಾರರು ತಮ್ಮ ವಾಹನ ಮೌಲ್ಯದ ದುಪ್ಪಟ್ಟು ಮೊತ್ತದ ಬ್ಯಾಂಕ್ ಗ್ಯಾರೆಂಟಿ ನೀಡಬೇಕೆಂದು ವಿಧಿಸಿದ ಷರತ್ತು ಕಠಿಣವಾದದ್ದೆಂದು ಅಭಿಪ್ರಾಯ ಪಟ್ಟ ಉಚ್ಚ ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯದ ಆದೇಶವನ್ನು ಮಾರ್ಪಾಡು ಮಾಡಿ, ಹೊಸ ಷರತ್ತುಗಳನ್ನು ಅರ್ಜಿದಾರರಿಗೆ ವಿಧಿಸಿ ಸದರಿ ಪರಿಷ್ಕರಣಾ ಅರ್ಜಿಯನ್ನು ಪುರಸ್ಕರಿಸಿದೆ.

*ಕ್ರಿಮಿನಲ್ ಪುನರೀಕ್ಷಣಾ ಅರ್ಜಿ ಸಂಖ್ಯೆ: 988/2019, ದಿನಾಂಕ 22ನೇ ಅಕ್ಟೋಬರ್, 2019.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ಕ್ರಿಮಿನಲ್ ಪುನರೀಕ್ಷಣಾ ಅರ್ಜಿ ಸಂಖ್ಯೆ. 602/2019*
*ಸಂದೇಶ್ ಕೆ. ಶೆಟ್ಟಿ –ವಿರುದ್ಧ– ಶ್ರೀ ಬಿ.ಕೆ. ಮೂರ್ತಿ (ಉಲ್ಲೇಖ) 7*
*2. ಕ್ರಿಮಿನಲ್ ಅರ್ಜಿ ಸಂಖ್ಯೆ: 8275/2018*
*ಶಿವಪ್ರಸಾದ್ –ವಿರುದ್ಧ– ಕರ್ನಾಟಕ ರಾಜ್ಯ (ಉಲ್ಲೇಖ) 11*
*3. ಎಐಆರ್ 2003 ಎಸ್‌ಸಿ 638*
*ಸುಂದರಬಾಯಿ ಅಂಬಲಾಲ್ ದೇಸಾಯಿ*
*–ವಿರುದ್ಧ– ಗುಜರಾತ್ ರಾಜ್ಯ (ಉಲ್ಲೇಖ) 13*

ಅರ್ಜಿದಾರರ ಪರ : ಶ್ರೀ ಚಂದ್ರಹಾಸ ರೈ ಬಿ. ವಕೀಲರ ಪರವಾಗಿ
ಶ್ರೀ ರಾಜೇಶ್ ರೈ.ಕೆ. ವಕೀಲರು)
ಪ್ರತ್ಯರ್ಜಿದಾರರ ಪರ : ಶ್ರೀ ದಿವಾಕರ್ ಮದ್ದೂರ್ ಹೆಚ್.ಸಿ.ಜಿ.ಪಿ

**ಆದೇಶ**

**ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್:**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ದಕ್ಷಿಣ ಕನ್ನಡ, ಮಂಗಳೂರು ಇವರು ಕ್ರಿ.ಸಂ.ಸಂ.130/2019ರಲ್ಲಿ ದಿನಾಂಕ: 1.2.2019ರಂದು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ವಾಹನದ ಮಾಲೀಕ–ಅರ್ಜಿದಾರನು ಈ ಅಪೀಲು ಅರ್ಜಿಯನ್ನು ಸಲ್ಲಿಸಿರುವನು. ಅದರಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 451 ಮತ್ತು 457ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿದ ಅರ್ಜಿಯನ್ನು ಕೆಲವು ಷರತ್ತುಗಳನ್ನು ವಿಧಿಸುವ ಮೂಲಕ ಪುರಸ್ಕರಿಸಲಾಗಿದ್ದು, ಅದರಂತೆ, ನೋಂದಣಿ ಸಂಖ್ಯೆ: ಕೆಎ 19 ಎಬಿ.0011 ಅನ್ನು ಹೊಂದಿರುವ ವಾಹನವನ್ನು, ನ್ಯಾಯಾಲಯಕ್ಕೆ ಮನವರಿಕೆಯಾಗುವಂತೆ ವಾಹನದ ಮೌಲ್ಯದ ದುಪ್ಪಟ್ಟು ಮೌಲ್ಯದ ನವೀಕರಿಸಬಹುದಾದ ಬ್ಯಾಂಕ್ ಖಾತರಿಯ

ರೂಪದಲ್ಲಿ ಅರ್ಜಿದಾರ–ಆರ್.ಸಿ. ಮಾಲೀಕನು ಭದ್ರತೆ ಒದಗಿಸುವ ಷರತ್ತಿನ ಮೇಲೆ ಅವನ ಪರವಾಗಿ ಬಿಡುಗಡೆ ಮಾಡುವಂತೆ ಆದೇಶಿಸಲಾಗಿದೆ.

2. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದವನ್ನು ಮತ್ತು ಪ್ರತ್ಯರ್ಜಿದಾರ ಸರ್ಕಾರದ ಪರವಾಗಿ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು ಮಂಡಿಸಿದ ವಾದವನ್ನು ಆಲಿಸಿದ್ದೇನೆ.

3. ಮೊಕದ್ದಮೆಯ ಸಂಕ್ಷಿಪ್ತ ವಾಸ್ತವಿಕ ಸಂಗತಿಗಳು ಹೀಗಿವೆ: ದಿನಾಂಕ 30.1.2018ರಂದು ದೂರುದಾರ ಮತ್ತು ಇತರ ಇಬ್ಬರು ಮತ್ತು ಒಬ್ಬ ಗೃಹರಕ್ಷಕ ದಳದ ಸಿಬ್ಬಂದಿ ನೋಂದಣಿ ಸಂಖ್ಯೆ: ಕೆಎ 19 ಎಬಿ.0011 ಹೊಂದಿರುವ ವಾಹನವನ್ನು ತಪಾಸಣೆ ಮಾಡಿದಾಗ ಅದರಲ್ಲಿ ಮರಳಿರುವುದು ಕಂಡುಬಂದು, ಆ ಬಗ್ಗೆ ವಿಚಾರಣೆ ಮಾಡಿದಾಗ, ಲಾರಿಯ ಚಾಲಕನು ಸದರಿ ಲಾರಿಯ ಮಾಲೀಕನ ಸೂಚನೆಯಂತೆ ಮರಳನ್ನು ಕೇರಳ ರಾಜ್ಯಕ್ಕೆ ಸಾಗಿಸಲಾಗುತ್ತಿದೆ ಎಂದು ಒಪ್ಪಿಕೊಂಡಿರುತ್ತಾನೆ ಮತ್ತು ಲಾರಿಯ ಚಾಲಕನು ಸದರಿ ಮರಳನ್ನು ಸಾಗಣೆ ಮಾಡುವುದಕ್ಕೆ ಯಾವುದೇ ಪರವಾನಗಿಯನ್ನು ಅಥವಾ ಲೈಸೆನ್ಸ್ ಅನ್ನು ಹೊಂದಿರುವುದಿಲ್ಲ. ಸದರಿ ಲಾರಿಯನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮುಂದೆ ಹಾಜರುಪಡಿಸಲಾಗಿರುತ್ತದೆ ಮತ್ತು ತದನುಸಾರವಾಗಿ ಲಾರಿಯನ್ನು ಜಪ್ತಿ ಮಾಡಲಾಗಿರುತ್ತದೆ ಮತ್ತು ಪಿ.ಸಿ.ಸಂಖ್ಯೆ: 51/2018ರಲ್ಲಿ ಮೊಕದ್ದಮೆ ನೋಂದಾಯಿತವಾಗಿರುತ್ತದೆ. ತತ್ಪರಿಣಾಮವಾಗಿ, ಅರ್ಜಿದಾರ ಮಾಲೀಕನು ದಂಡ ಪ್ರಕ್ರಿಯಾ ಸಂಹಿತೆಯ 451 ಮತ್ತು 457ನೇ ಪ್ರಕರಣದ ಅಡಿಯಲ್ಲಿ ಮಧ್ಯಕಾಲೀನ ಅಭಿರಕ್ಷವಾಗಿ ನೋಂದಣಿ ಸಂಖ್ಯೆ: ಕೆಎ.19 ಎಬಿ.0011 ಹೊಂದಿರುವ ವಾಹನವನ್ನು ಬಿಡುಗಡೆಗೊಳಿಸುವಂತೆ ಕೋರಿ ಅಪೀಲು ಸಲ್ಲಿಸಿರುತ್ತಾನೆ.

4. ಸದರಿ ಅರ್ಜಿಯ ವಾದಾಂಶದಲ್ಲಿ, ಅರ್ಜಿದಾರನು ಸದರಿ ವಾಹನದ ನಿರುಪಾದಿಕ ಮಾಲೀಕನಾಗಿರುವನು ಮತ್ತು ದೂರುದಾರನು ಈ ವಾಹನದ ಮೇಲೆ ಗಣಿ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957ರ 21(1)ನೇ ಪ್ರಕರಣವನ್ನು ಓದಿಕೊಳ್ಳುವುದರೊಂದಿಗೆ 4(1)ನೇ ಪ್ರಕರಣ,

9ನೇ ಪ್ರಕರಣ 23(ಸಿ), 1ಇ ಮತ್ತು ಜಿ ಮತ್ತು 24(1)ಇ ಪ್ರಕರಣದ ಅಡಿಯಲ್ಲಿ ಮೊಕದ್ದಮೆಯನ್ನು ದಾಖಲಿಸಿರುತ್ತಾನೆ. ಜಪ್ತಿಯಾದ ವಾಹನವು ಉಲ್ಲಾಳ ಪೊಲೀಸರ ಅಭಿರಕ್ಷೆಯಲ್ಲಿದೆ. ಸದರಿ ವಾಹನವನ್ನು ಪೊಲೀಸ್ ಠಾಣೆಯಲ್ಲಿ ಇಟ್ಟರೆ, ಅದು ಹಾಳಾಗಿ ಗುಜರಿ ವಸ್ತುವಾಗುವ ಸಂಭವವಿದೆ ಮತ್ತು ಅರ್ಜಿದಾರನಿಗೆ ಇದರಿಂದ ಭಾರೀ ನಷ್ಟವಾಗುತ್ತದೆ ಮತ್ತು ಇದೊಂದು ರಾಷ್ಟ್ರೀಯ ನಷ್ಟವಾಗುತ್ತದೆ. ಸದರಿ ವಾಹನವು ತನಿಖೆಯ ಉದ್ದೇಶಕ್ಕಾಗಿ ಅಗತ್ಯ ಇರುವುದಿಲ್ಲ ಮತ್ತು ವಾಹನದ ಮಾಲೀಕ ಕುಟುಂಬದ ಸದಸ್ಯರು ಸದರಿ ವಾಹನದ ಆದಾಯವನ್ನೇ ಅವಲಂಬಿಸಿರುವರು. ನ್ಯಾಯಾಲಯವು ವಿಧಿಸಿದ ಯಾವುವೇ ಷರತ್ತುಗಳನ್ನೇ ನೆರವೇರಿಸಲು ಅರ್ಜಿದಾರನು ಸಿದ್ಧನಿರುವನು ಎಂಬುದು ಅರ್ಜಿದಾರನ ವಾದಾಂಶವಾಗಿದೆ.

5. ಸದರಿ ಅರ್ಜಿಯನ್ನು ಆಕ್ಷೇಪಿಸಿದ ಪ್ರಾಸಿಕ್ಯೂಷನ್ ಹೀಗಿದೆ. ಅರ್ಜಿದಾರನು ವಾಹನವನ್ನು ಮಾರಾಟ ಮಾಡುವ ಸಾಧ್ಯತೆ ಇದೆ ಮತ್ತು ಇದೇ ರೀತಿಯ ಅಪರಾಧ ಎಸಗುವುದಕ್ಕಾಗಿ ವಾಹನವನ್ನು ಬಳಕೆ ಮಾಡಿಕೊಳ್ಳುವ ಸಾಧ್ಯತೆಯೂ ಇದೆ ಮತ್ತು ಅವನು ವಿಚಾರಣೆಯ ಕಾಲಾವಧಿಯಲ್ಲಿ ಸಕ್ಷಮ ನ್ಯಾಯಾಲಯದ ಮುಂದೆ ಅದನ್ನು ಹಾಜರುಪಡಿಸದಿರುವ ಸಾಧ್ಯತೆಯೂ ಇದೆ ಎಂದು ವಾದಿಸಿದ್ದಾರೆ. ಕರ್ನಾಟಕ ಸಣ್ಣ ಖನಿಜಗಳ ರಿಯಾಯಿತಿ ನಿಯಮಗಳು, 1994 (ಇಲ್ಲಿ ಇನ್ನು ಮುಂದೆ ಇದನ್ನು ಕ.ಸ.ಖ.ರಿ.ನಿಯಮಗಳು ಎಂದು ಸಂಕ್ಷಿಪ್ತವಾಗಿ ಉಲ್ಲೇಖಿಸಲಾಗಿದೆ)ರ 43(8)ನೇ ನಿಯಮಕ್ಕೆ ಮಾಡಿದ ತಿದ್ದುಪಡಿಯಂತೆ, ಅರ್ಜಿದಾರನು ಕ್ರಿಮಿನಲ್ ಅರ್ಜಿ ಸಂಖ್ಯೆ: 101008/2018 ದಿನಾಂಕ: 11.08.2018ರಲ್ಲಿ ವರದಿಯಾಗಿರುವಂತೆ ಸದರಿ ಮೊತ್ತದ ದುಪ್ಪಟ್ಟು ಮೊಬಲಗನ್ನು ನವೀಕರಿಸಬಹುದಾದ ಬ್ಯಾಂಕ್ ಖಾತರಿಯನ್ನು ಕಾರ್ಯಗತಗೊಳಿಸಬೇಕು ಎಂದು ವಾದದಲ್ಲಿ ನಿವೇದಿಸಿರುವರು.

6. ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಎರಡು ಪಕ್ಷಕಾರರ ಪರವಾಗಿ ಹಾಜರಾದ ನ್ಯಾಯವಾದಿಗಳ ವಾದವನ್ನು ಆಲಿಸಿದ ತರುವಾಯ, ನಿರ್ದಿಷ್ಟ ಷರತ್ತುಗಳನ್ನು ವಿಧಿಸುವ ಮೂಲಕ ವಾಹನವನ್ನು ಬಿಡುಗಡೆಗೊಳಿಸಲು ಆದೇಶಿಸಿರುವರು.

7. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು, ತಮ್ಮ ವಾದಾಂಶದಲ್ಲಿ ಸದರಿ ಆದೇಶವು ಸಮರ್ಥನೀಯವಾಗಿದ್ದರೂ, ವಾಹನದ ಮೌಲ್ಯದ ದುಪ್ಪಟ್ಟು ಮೊಬಲಗಿಗೆ ಸಮಾನವಾದ ಬ್ಯಾಂಕ್ ಖಾತರಿಯನ್ನು ಒದಗಿಸುವುದಕ್ಕೆ ವಿಧಿಸಲಾದ ಷರತ್ತು ಕಠಿಣತಮವಾಗಿದೆ ಎಂದು ವಾದಿಸಿದ್ದಾರೆ. ಆ ಮಟ್ಟಿಗೆ ಸದರಿ ಆದೇಶವನ್ನು ಮಾರ್ಪಾಟು ಮಾಡುವುದಕ್ಕೆ ಅರ್ಹವಾಗಿದೆ. ಮುಂದುವರೆಸುತ್ತಾ ಈ ಮೊಕದ್ದಮೆಗೆ ಆಧಾರವಾಗಿ ***ಸಂದೇಶ್ ಕೆ. ಶೆಟ್ಟಿ –ವಿರುದ್ಧ– ಶ್ರೀ ಬಿ.ಕೆ. ಮೂರ್ತಿ*** [1] ಮೊಕದ್ದಮೆಯ ನಿರ್ಣಯವನ್ನು ಉಲ್ಲೇಖಿಸುತ್ತಾ ಅದರಲ್ಲಿ ಇದೇ ರೀತಿಯ ಆದೇಶವನ್ನು ಹೊರಡಿಸಲಾಗಿರುತ್ತದೆ ಮತ್ತು ಅದೇ ರೀತಿಯ ಷರತ್ತುಗಳನ್ನು ವಿನಾಯಿತಿಗೊಳಿಸಲಾಗಿರುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ. ಈ ಕಾರಣದಿಂದ ಅರ್ಜಿಯನ್ನು ಪುರಸ್ಕರಿಸಿ ಷರತ್ತನ್ನು ಸಡಿಲಗೊಳಿಸುವಂತೆ ಪ್ರಾರ್ಥಿಸಿರುತ್ತಾರೆ.

8. ಇದಕ್ಕೆ ವಿರೋಧವಾಗಿ, ಮಾನ್ಯ ಉಚ್ಚನ್ಯಾಯಾಲಯದ ಸರ್ಕಾರಿ ವಕೀಲರು ದೃಢವಾಗಿ ವಾದಿಸುತ್ತಾ ಅಧೀನ ನ್ಯಾಯಾಲಯವು ಕ.ಸ.ಖ.ರಿ.ನಿಯಮಗಳ 43(8)ನೇ ನಿಯಮದ ಉಪಬಂಧಗಳನ್ನು ಪರಿಗಣನೆಗೆ ತೆಗೆದುಕೊಂಡ ನಂತರ ಅದು ವಾಹನದ ಮೌಲ್ಯದ ದುಪ್ಪಟ್ಟು ಮೊತ್ತದ ನವೀಕರಿಸಬಹುದಾದ ಬ್ಯಾಂಕ್ ಖಾತರಿಯ ರೂಪದಲ್ಲಿ ಭದ್ರತೆಯನ್ನು ಒದಗಿಸುವ ಷರತ್ತನ್ನು ವಿಧಿಸಿರುವುದು ಸರಿಯಾಗಿದೆ, ಏಕೆಂದರೆ ಸದರಿ ಉಪಬಂಧಗಳನ್ನು ಕ.ಸ.ಖ.ರಿ. ನಿಯಮಗಳಲ್ಲಿ ಮಾಡಲಾಗಿರುವುದರಿಂದ ಅದನ್ನು ಅನುಸರಿಸಬೇಕಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ. ತಮ್ಮ ನಿವೇದನೆಯನ್ನು ಮುಂದುವರೆಸಿ, ಸದರಿ ಅಪರಾಧಕ್ಕಾಗಿ ಆಪಾದಿತನ ಅಪರಾಧ ನಿರ್ಣಯವಾದ ಸಂದರ್ಭದಲ್ಲಿ ಸದರಿ ವಾಹನವನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಅರ್ಹವಾಗಿದೆ ಮತ್ತು ಹಣಕ್ಕೆ ಖಾತರಿ ಪಡೆಯುವ ಸಲುವಾಗಿ ಸದರಿ ಷರತ್ತನ್ನು ವಿಧಿಸಲಾಗಿದೆ ಎಂದು ನಿವೇದಿಸಿಕೊಳ್ಳುತ್ತಾ, ಈ ಎಲ್ಲಾ ಕಾರಣಗಳ ಮೇಲೆ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿರುವರು.

1. ಕ್ರಿಮಿನಲ್ ಪುನರೀಕ್ಷಣಾ ಅರ್ಜಿ ಸಂಖ್ಯೆ. 602/2019 ದಿನಾಂಕ: 18.06.2019

9. ನಾನು, ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಮಂಡಿಸಿದ ನಿವೇದನೆಗಳನ್ನು ಮತ್ತು ಅಭಿಲೇಖಗಳನ್ನು ಜಾಗರೂಕತೆಯಿಂದ ಮತ್ತು ತುಂಬಾ ಎಚ್ಚರಿಕೆಯಿಂದ ಅವಲೋಕಿಸಿರುತ್ತೇನೆ.

10. ದಾಖಲೆಗಳನ್ನು ಪರಿಶೀಲಿಸಿದಾಗ, ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಾಹನದ ಬಿಡುಗಡೆಗೊಳಿಸಿರುವ ಸಂಬಂಧದಲ್ಲಿ ಯಾವುದೇ ವಿವಾದವಿರುವುದಿಲ್ಲ. ಈ ನ್ಯಾಯಾಲಯದ ಮುಂದೆ ಉದ್ಭವವಾಗಿರುವ ಒಂದೇ ಒಂದು ವಿವಾದಾಂಶ ಮತ್ತು ಪ್ರಶ್ನೆ ಏನೆಂದರೆ, ಅಧೀನ ನ್ಯಾಯಾಲಯವು ವಿಧಿಸಿದ ಷರತ್ತನ್ನು ಪೂರೈಸುವುದಕ್ಕೆ ವಾಹನದ ಮಾಲೀಕನು ವಾಹನದ ಮೌಲ್ಯದ ದುಪ್ಪಟ್ಟು ಮೊತ್ತವನ್ನು ನವೀಕರಿಸಬಹುದಾದ ಬ್ಯಾಂಕ್ ಖಾತರಿಯ ರೂಪದಲ್ಲಿ ವಾಹನ ಮಾಲೀಕನು ಭದ್ರತೆಯನ್ನು ಒದಗಿಸಬೇಕು ಎಂಬ ಮಟ್ಟಿಗೆ ಅಧೀನ ನ್ಯಾಯಾಲಯವು ವಿಧಿಸಿರುವ ಷರತ್ತು ಕಠಿಣವಾಗಿದ್ದು ಮತ್ತು ಕಾರ್ಯಗತಗೊಳಿಸಲು ಸಾಧ್ಯವಾಗದ ರೀತಿಯಲ್ಲಿದೆ. ಸಂಕ್ಷಿಪ್ತತೆಯ ಉದ್ದೇಶಕ್ಕಾಗಿ, ನಾನು, ಅಧಿಸೂಚನೆ ಸಂಖ್ಯೆ: ಸಿಐ 302 ಎಂಎಂಎನ್ 2017, ದಿನಾಂಕ: 16.11.2017ರ ಮೂಲಕ ತಿದ್ದುಪಡಿಯಾದಂತೆ ಕ.ಸ.ಖ.ರಿ.ನಿಯಮಗಳ 43(5) ಮತ್ತು (8)ನೇ ನಿಯಮವನ್ನು ಇಲ್ಲಿ ಉಲ್ಲೇಖಿಸುತ್ತೇನೆ. ಅದನ್ನು ಈ ಕೆಳಗಿನಂತೆ ಓದಿಕೊಳ್ಳುವುದು:

> ‘‘**43. ಸಾಗಣೆ ಮಾಡುವ ಖನಿಜಗಳ ತಪಾಸಣೆ ಮತ್ತು ತಪಾಸಣಾ ಕೇಂದ್ರಗಳು.–**
>
> (1) XXX XXX
> (2) XXX XXX
> (3) XXX XXX
> (4) XXX XXX

(5) ತಪಾಸಣಾ ಕೇಂದ್ರದ (ಚೆಕ್ ಪೋಸ್ಟ್) ಅಥವಾ ಅಡ್ಡಗಟ್ಟೆಗಳ ಪ್ರಭಾರ ಹೊಂದಿರುವ ಅಧಿಕಾರಿ ಅಥವಾ ಅಧಿಕೃತ ಅಧಿಕಾರಿಯು, ಅಂಥ ವಾಹನದ ಚಾಲಕ ಅಥವಾ ವ್ಯಕ್ತಿಯು ಸಿಂಧುವಾದ ಪರವಾನಗಿಯನ್ನು ಹಾಜರುಪಡಿಸಲು ವಿಫಲವಾದ ಪಕ್ಷದಲ್ಲಿ ಅದನ್ನು ಯಾವುದೇ ಸಣ್ಣ ಖನಿಜಗಳೂ ಒಳಗೊಂಡಂತೆ ಅಂಥ ಸಣ್ಣ ಖನಿಜವನ್ನು ಸಾಗಿಸುವುದಕ್ಕಾಗಿ ಬಳಸಿದ ವಾಹನವನ್ನು ಜಪ್ತಿ ಮಾಡತಕ್ಕದ್ದು.

(6) xxx xxx

(7) xxx xxx

(8) ಆದಾಗ್ಯೂ, ಅದರ ಮಾಲೀಕನು ಯಾವ ಅಪರಾಧದ ಕಾರಣಕ್ಕಾಗಿ ಜಪ್ತಿ ಮಾಡಲಾಗಿದೆಯೇ ಅಂತಹ ಅಪರಾಧವನ್ನು ಅಧಿವಿಚಾರಣೆಗೆ ಮಾಡುವ ಅಧಿಕಾರ ವ್ಯಾಪ್ತಿ ಹೊಂದಿರುವ ಸಕ್ಷಮ ನ್ಯಾಯಾಲಯದ ಮುಂದೆ ಅಂಥ ವಾಹನ ಮೌಲ್ಯದ ದುಪ್ಪಟ್ಟು ಮೊಬಲಗಿಗೆ ಸಮನಾದ ಮೊತ್ತವನ್ನು ನವೀಕರಿಸಬಹುದಾದ ಬ್ಯಾಂಕ್ ಖಾತರಿಯ ರೂಪದಲ್ಲಿ ಭದ್ರತೆಯನ್ನು ಕಾರ್ಯಗತಗೊಳಿಸಿದ ಹೊರತು, ಹಾಗೆ ಜಪ್ತಿ ಮಾಡಲಾದ ಸಣ್ಣ ಖನಿಜಗಳನ್ನು ಒಳಗೊಂಡಿರದ ವಾಹನವನ್ನು ಬಿಡುಗಡೆಗೊಳಿಸತಕ್ಕದ್ದಲ್ಲ;

ಪರಂತು, (7)ನೇ ಉಪನಿಯಮದ ಅಡಿಯಲ್ಲಿ ಸಕ್ಷಮ ನ್ಯಾಯಾಲಯಕ್ಕೆ ವರದಿ ಮಾಡಿದಲ್ಲಿ, ಜಪ್ತಿಯಾದ ವಾಹನವನ್ನು ಅಂಥ ನ್ಯಾಯಾಲಯ ಆದೇಶಗಳನ್ನು ಮಾಡದ ಹೊರತು ಬಿಡುಗಡೆಗೊಳಿಸತಕ್ಕದ್ದಲ್ಲ.

11. ನಾನು ಸದರಿ ಉಪಬಂಧವನ್ನು ಬಹಳ ಜಾಗರೂಕತೆಯಿಂದ ಮತ್ತು ಎಚ್ಚರಿಕೆಯಿಂದ ಪರಿಶೀಲಿಸಿರುತ್ತೇನೆ. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು, ***ಶಿವಪ್ರಸಾದ್ -ವಿರುದ್ಧ- ಕರ್ನಾಟಕ ಸರ್ಕಾರ***[2] ಮತ್ತು ಮೇಲೆ ಉಲ್ಲೇಖಿಸಿದ ***ಸಂದೇಶ್ ಕೆ. ಶೆಟ್ಟಿ*** ಮೊಕದ್ದಮೆಯಲ್ಲಿನ ಮತ್ತೊಂದು ನಿರ್ಣಯವನ್ನು ಆಧಾರವಾಗಿ ನೀಡಿರುವರು. ಸದರಿ ತೀರ್ಪುಗಳನ್ನು ನಾನು ಪರಾಮರ್ಶಿಸಿದ್ದೇನೆ. ಉಭಯ ತೀರ್ಪುಗಳಲ್ಲಿ ಕ.ಸ.ಖ.ರಿ.ನಿಯಮಗಳ 43ನೇ ನಿಯಮವನ್ನು ಪರಿಗಣಿಸಿರುವಂತಹ ಆ ಯಾವುದೇ ಸನ್ನಿವೇಶಗಳು ಇರಲಿಲ್ಲ. ಸದರಿ ಸಂಗತಿ ಮತ್ತು ಸನ್ನಿವೇಶಗಳಲ್ಲಿ ವಿಧಿಸಲಾದ ಷರತ್ತು ತುಂಬಾ ಕಠಿಣವಾಗಿದೆ ಎಂದು ಪರಿಗಣಿಸಲಾಗಿದೆ ಮತ್ತು ಅದನ್ನು ವಿನಾಯಿತಿಗೊಳಿಸಲಾಗಿದೆ.

12. ದಿನಾಂಕ: 16.11.2017ರ ಅಧಿಸೂಚನೆ ಸಂಖ್ಯೆ: ಸಿಐ 302 ಎಂಎಂಎನ್ 2017ರಲ್ಲಿ ಕಂಡುಬಂದಿರುವಂತೆ 43ನೇ ನಿಯಮದ (5) (6) (7) ಮತ್ತು (8)ನೇ ಉಪ ನಿಯಮವನ್ನು ತಿದ್ದುಪಡಿ ಮಾಡಲಾಗಿದೆ ಮತ್ತು 8ನೇ ಉಪನಿಯಮದ ಪ್ರಕಾರ ಹಾಗೆ ಜಪ್ತಿ ಮಾಡಲಾಗಿರುವ ಯಾವುವೇ ವಾಹನವನ್ನು ಅದರ ಮಾಲೀಕನು ಅಂಥ ವಾಹನದ ಮೌಲ್ಯದ ದುಪ್ಪಟ್ಟು ಮೌಲ್ಯಕ್ಕೆ ಸಮನಾದ ಮೊತ್ತವನ್ನು ನವೀಕರಿಸಬಹುದಾದ ಬ್ಯಾಂಕ್ ಖಾತರಿಯ ರೂಪದಲ್ಲಿ ಭದ್ರತೆಯಾಗಿ ಕಾರ್ಯಗತಗೊಳಿಸದ ಹೊರತು ಬಿಡುಗಡೆ ಮಾಡತಕ್ಕದ್ದಲ್ಲ ಎಂದು ಆದೇಶಿಸುತ್ತದೆ. ಇಲ್ಲಿ ತಕ್ಕದ್ದು ಪದವನ್ನು ಬಳಕೆ ಮಾಡಲಾಗಿದೆ. ಆ ಹಿನ್ನೆಲೆಯಲ್ಲಿ ನಿಯಮಗಳಿಗೆ ಕರಾರುವಾಕ್ಕಾದ ವ್ಯಾಖ್ಯಾನವನ್ನು ನೀಡಬೇಕಾಗಿದೆ ಮತ್ತು ಅದು ಕಾನೂನಿನಲ್ಲಿ ಕಡ್ಡಾಯವಾಗಿದೆ. ಈ ಹಿನ್ನೆಲೆಯಲ್ಲಿ, ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಪ್ರಶ್ನಿತ ಆದೇಶವನ್ನು ಹೊರಡಿಸಿರುವಂತೆ ತೋರುತ್ತದೆ.

13. ಸದರಿ ಆದೇಶವು ನಿಯಮಕ್ಕನುಸಾರವಾಗಿದೆ ಎಂಬುದು ನಿಸ್ಸಂಶಯವಾಗಿದೆ. ಆದಾಗ್ಯೂ, ನ್ಯಾಯಾಲಯವು ಹೊರಡಿಸಿದ ಬಿಡುಗಡೆ ಆದೇಶವು ಪಕ್ಷಕಾರರಿಗೆ

2. ಕ್ರಿಮಿನಲ್ ಅರ್ಜಿ ಸಂಖ್ಯೆ: 8275/2018

ಅಷ್ಟೊಂದು ಕಠಿಣತಮವಾಗಿರತಕ್ಕದ್ದಲ್ಲ ಅಥವಾ ಪಕ್ಷಕಾರರಿಗೆ ಅಸಾಧ್ಯವಾಗಬಹುದಾದಂಥ ರೀತಿಯಲ್ಲಿ ಇರತಕ್ಕದ್ದಲ್ಲ. ಕಾರ್ಯಗತಗೊಳಿಸಲು ಸಾಧ್ಯವಾಗಬಹುದಾದ ಆದೇಶಗಳನ್ನು ಹೊರಡಿಸಬೇಕಾಗುತ್ತದೆ. ಸಾಮಾನ್ಯವಾಗಿ ಅಂಥ ಪ್ರಕರಣಗಳಲ್ಲಿ ಬಳಸುವ ವಾಹನಗಳು ಟ್ರ್ಯಾಕ್ಟರ್, ಲಾರಿ ಮತ್ತು ಇತರ ವಾಹನಗಳಾಗಿರುತ್ತವೆ. ಅವುಗಳನ್ನು ಬಹುತೇಕ ಕೃಷಿಯ ಉದ್ದೇಶಕ್ಕಾಗಿ ಕೃಷಿಕರು ಬಳಕೆ ಮಾಡುವರು. ಅಂಥ ಸನ್ನಿವೇಶಗಳಲ್ಲಿ ವಾಹನದ ಮೌಲ್ಯದ ದುಪ್ಪಟ್ಟು ಮೊತ್ತವನ್ನು ಬ್ಯಾಂಕ್ ಖಾತರಿಯಾಗಿ ನೀಡುವುದಕ್ಕೆ ಕಠಿಣತಮ ಷರತ್ತು ವಿಧಿಸಿದಲ್ಲಿ, ವಾಹನದ ಮಾಲೀಕರು ವಾಹನವನ್ನು ಹಿಂದಕ್ಕೆ ಪಡೆದುಕೊಳ್ಳಲು ಸಾಧ್ಯವಾಗದಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಬ್ಯಾಂಕ್ ಖಾತರಿ ನೀಡುವ ಸಲುವಾಗಿ, ಬ್ಯಾಂಕ್‌ನಲ್ಲಿ ನಗದು/ಮೊತ್ತದ ರೂಪದಲ್ಲಿ ವಾಹನದ ಮೌಲ್ಯವನ್ನು ಠೇವಣಿ ಇಡಬೇಕಾಗುತ್ತದೆ. ಈ ಸನ್ನಿವೇಶವನ್ನು ವಾಸ್ತವಿಕ ದೃಷ್ಟಿಕೋನದಲ್ಲಿ ನೋಡಬೇಕಾಗುತ್ತದೆ. ಮಾಲೀಕರನ್ನು ಕೆಲವೊಮ್ಮೆ ಇಂತಹ ಪ್ರಕರಣದಲ್ಲಿ ಸಿಕ್ಕಿಸಲು ಸಾಧ್ಯವಾಗುವುದಿಲ್ಲ ಮತ್ತು ಅವರಿಗೆ ಅದರ ಬಗ್ಗೆ ಅರಿವು ಇರುವುದಿಲ್ಲ ಅಥವಾ ಅವರು ಸಮ್ಮತಿಯನ್ನೂ ನೀಡಿರುವುದಿಲ್ಲ. ವಾಹನದೊಂದಿಗೆ ಸ್ವತಃ ಚಾಲಕ ಅಥವಾ ವಾಹನವನ್ನು ಯಾರಿಗೆ ವಹಿಸಿಕೊಡಲಾಗಿದೆಯೋ ಆ ವ್ಯಕ್ತಿಯು ವಾಹನದ ಮಾಲೀಕನ ಅರಿವಿಗೆ ಬಾರದಂತೆ ಅಥವಾ ಸಮ್ಮತಿಯನ್ನು ಪಡೆಯದೇ ಮರಳು ಅಥವಾ ಖನಿಜಗಳನ್ನು ಸಾಗಣೆ ಮಾಡುವುದಕ್ಕಾಗಿ ವಾಹನವನ್ನು ಬಳಸಿರಬಹುದು. ಈ ಹಿನ್ನೆಲೆಯಲ್ಲಿ, ವಾಹನದ ಮೌಲ್ಯಕ್ಕಿಂತ ದುಪ್ಪಟ್ಟು ಮೊತ್ತಕ್ಕೆ ಸಮನಾದ ಬ್ಯಾಂಕ್ ಖಾತರಿಯನ್ನು ನೀಡುವಂತಹ ಷರತ್ತನ್ನು ನೆರವೇರಿಸುವುದಕ್ಕೆ ಬಡ ಕೃಷಿಕ/ಮಾಲೀಕರಿಗೆ ತುಂಬಾ ಕಷ್ಟಕರವಾಗಿರುತ್ತದೆ. ತದನುಸಾರವಾಗಿ, ಒಪ್ಪಿಕೊಂಡಿರುವಂತೆ ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆಯ 451 ಮತ್ತು 457ನೇ ಪ್ರಕರಣದ ಅಡಿಯಲ್ಲಿ ಸದರಿ ಅರ್ಜಿಯನ್ನು ದಾಖಲಿಸಿರುವರು. ಮಧ್ಯಂತರ ಅಭಿರಕ್ಷೆಗಾಗಿ ವಾಹನವನ್ನು ಬಿಡುಗಡೆಗೊಳಿಸುವಾಗ ಅಂಥ ಕಠಿಣತಮ ಷರತ್ತನ್ನು ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಎಲ್ಲೂ ವಿಧಿಸಿರುವುದಿಲ್ಲ. ಕ.ಸ.ಖ.ರಿ.ನಿಯಮಗಳಲ್ಲಿ ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳುವುದನ್ನು ನಿಸ್ಸಂಶಯವಾಗಿ ನಿಯಮಿಸಿದೆಯಾದರೂ ಶಾಸನದ ಉದ್ದೇಶವು ಸದರಿ ವಾಹನವನ್ನು ಅದೇ ರೀತಿಯ ಅಪರಾಧಕ್ಕಾಗಿ ಪದೇ ಪದೇ ಬಳಕೆ ಮಾಡಬಾರದು ಮತ್ತು

ವಾಹನವನ್ನು ಮುಟ್ಟುಗೋಲು ಮಾಡಿಕೊಂಡ ಸಂದರ್ಭದಲ್ಲಿ ಅಂಥ ರೀತಿಯ ಮೊಬಲಗನ್ನು ವಸೂಲಿ ಮಾಡದ ಹೊರತು ಅಂಥ ಅಪರಾಧದ ವಿಧಾನಗಳನ್ನು ಅಪರಾಧಗಳನ್ನು ನಿರ್ಬಂಧಿಸಲು ಯಾವುದೇ ಹೆಚ್ಚಿನ ವಿಳಂಬವಿಲ್ಲದೆ ಸದರಿ ಹಣವನ್ನು ವಸೂಲಿ ಮಾಡುವ ಉದ್ದೇಶವನ್ನು ಹೊಂದಿದೆ. ಆದರೆ ವಾಹನದ ಮಧ್ಯಂತರ ಬಿಡುಗಡೆಯು ಉದ್ದೇಶಕ್ಕಾಗಿ ಇದೊಂದೇ ಅಂಶವನ್ನು ಗಮನಿಸಲಾಗುವುದಿಲ್ಲ. ***ಸುಂದರಬಾಯಿ ಅಂಬಲಾಲ್ ದೇಸಾಯಿ –ವಿರುದ್ಧ– ಗುಜರಾತ್ ಸರ್ಕಾರ***[3] ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಯಾವ ಸನ್ನಿವೇಶಗಳಲ್ಲಿ ಮತ್ತು ಯಾವ ಷರತ್ತಿನ ಮೇಲೆ ಮಧ್ಯಂತರ ಅಭಿರಕ್ಷೆಗಾಗಿ ಜಪ್ತಿಗೊಂಡ ಸ್ವತ್ತನ್ನು ಬಿಡುಗಡೆಗೊಳಿಸಬೇಕಾಗಿದೆ ಎಂಬ ನಿರ್ಣಯವನ್ನು ನೀಡಿದೆ. ಕಾನೂನಿನ ಸದರಿ ಪ್ರತಿಪಾದನೆಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯ ಹಾಗೂ ಈ ನ್ಯಾಯಾಲಯದ ಹಲವಾರು ನಿರ್ಣಯಗಳಲ್ಲಿ ಪುನರಾವರ್ತಿತವಾಗಿ ಒತ್ತಿಹೇಳಲಾಗಿದೆ. ಅಧೀನ ನ್ಯಾಯಾಲಯಗಳು ದಂಡ ಪ್ರಕ್ರಿಯಾ ಸಂಹಿತೆಯ 451ನೇ ಅಥವಾ 457ನೇ ಪ್ರಕರಣದ ಅಡಿಯಲ್ಲಿ ಅಧಿಕಾರವನ್ನು ಚಲಾಯಿಸುವಾಗ, ಸದರಿ ನಿಯಮವಾದ 43(8) ನಿಯಮವನ್ನು ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ ಮತ್ತು ಶಾಸನದ ಉದ್ದೇಶವನ್ನು ಸಂರಕ್ಷಿಸಲು ಯುಕ್ತವಾಗಿ ಕಾರ್ಯಗತಗೊಳಿಸಬಹುದಾದ ಆದೇಶವನ್ನು ಸಮತೋಲನವಾಗಿ ಹೊರಡಿಸಬೇಕಾಗಿದೆಯೇ ಹೊರತು ವಾಹನದ ಮಾರಾಟ ಮೌಲ್ಯ ನಷ್ಟವಾಗುವಂತೆ ಅಥವಾ ಕಡಿಮೆಯಾಗುವಂತೆ ಮಾಡುವುದಲ್ಲ. ಸದರಿ ವಾಹನವನ್ನು ಪೊಲೀಸರ ಅಭಿರಕ್ಷೆಯಲ್ಲಿ ಬಳಕೆ ಮಾಡದೆ ಇದ್ದ ಪಕ್ಷದಲ್ಲಿ ವಾಹನವು ತುಕ್ಕು ಹಿಡಿದು ಕೊನೆಗೆ ಅದು ಗುಜರಿ ವಸ್ತುವಾಗಬಹುದು. ಈ ಹಿನ್ನೆಲೆಯಲ್ಲಿ 43(8)ನೇ ನಿಯಮವನ್ನು ಗಮನಕ್ಕೆ ತಂದುಕೊಂಡಾಗ, ಸದರಿ ವಾಹನವು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ ಮತ್ತು ನಿಯಮದ ಉದ್ದೇಶವೇ ವಿಫಲವಾಗುತ್ತದೆ ಮತ್ತು ಅಪರಾಧ ಎಸಗಿದ ಯಾರೇ ವ್ಯಕ್ತಿಗೆ ಆ ನಷ್ಟವಾಗುವುದೇ ಇಲ್ಲ. ಆದರೆ ಆರೋಪಿತ ಚಾಲಕನೊಂದಿಗೆ ಸಹಕರಿಸದ ಯಾವುದೇ ರೀತಿಯಲ್ಲಿ ಅಪರಾಧಕ್ಕೆ ಸಂಬಂಧವಿರದ ನಿಜವಾದ ವಾಹನದ ಮಾಲೀಕನು ದಂಡನೆಗೆ

3. ಎಐಆರ್ 2003 ಎಸ್‌ಸಿ 638

ಒಳಗಾಗುತ್ತಾನೆ. ಕೊನೆಯದಾಗಿ ಸದರಿ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾದ ಸಂದರ್ಭದಲ್ಲಿ, ಬಳಕೆ ಮಾಡಿದ ವಾಹನವು ಮುಟ್ಟುಗೋಲಿಗೆ ಅರ್ಹವಾಗುತ್ತದೆ ಮತ್ತು ಅದನ್ನು ಹರಾಜಿನಲ್ಲಿ ಮಾರಾಟ ಮಾಡಲಾಗುತ್ತದೆ. ಅದರಿಂದ ಬಂದ ಮೊಬಲಗನ್ನು ರಾಜ್ಯ ಲೆಕ್ಕಕ್ಕೆ ಜಮೆ ಮಾಡಲಾಗುತ್ತದೆ. ಇದಕ್ಕೆ ಪ್ರತಿಯಾಗಿ, ವಾಹನದ ಮೌಲ್ಯಕ್ಕೆ ಸಂಬಂಧಿಸಿದಂತೆ ನಷ್ಟ ಭರ್ತಿ ಬಂಧಪತ್ರವನ್ನು (ಇಂಡೆಮ್ನಿಟಿ ಬಾಂಡ್) ಬರೆದುಕೊಡುವಂತೆ ಮಾಲೀಕನನ್ನು ಕೇಳಿಕೊಳ್ಳುವ ಮೂಲಕ ವಿವಿಧ ಷರತ್ತುಗಳನ್ನು ವಿಧಿಸಿ ಅದೇ ಹಿತಾಸಕ್ತಿಯನ್ನು ರಕ್ಷಿಸಿದರೆ, ಅದನ್ನು ಮಾಲೀಕನಿಂದ ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡಬಹುದು ಮತ್ತು ಸದರಿ ವಾಹನವನ್ನು ಮಾರಾಟ ಮಾಡುವುದನ್ನು ಅಥವಾ ವರ್ಗಾಯಿಸುವುದನ್ನು ತಪ್ಪಿಸುವುದಕ್ಕಾಗಿ ಆರ್‌ಟಿಒ ಕಚೇರಿಯಲ್ಲಿ ಸದರಿ ವಾಹನದ ಮೇಲೆ ಆರೋಪವನ್ನು ಸೃಜಿಸಬಹುದು. ಈ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡರೆ, ಕ.ಸ.ಖ.ರಿ.ನಿಯಮಗಳ 43(8)ನೇ ನಿಯಮದ ಉದ್ದೇಶವನ್ನು ಈಡೇರಿಸಿದಂತಾಗುತ್ತದೆ, ಮತ್ತು ನ್ಯಾಯದ ಉದ್ದೇಶವೂ ಈಡೇರುತ್ತದೆ.

14. ಮೇಲಿನ ಸದರಿ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ನಾನು ಪರಿಗಣಿಸಿದ ಅಭಿಪ್ರಾಯದಲ್ಲಿ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಧಿಸಿದ ಷರತ್ತುಗಳು ಸಮರ್ಥನೀಯವೆಂದು ಕಂಡುಬಂದರೂ, ಮೇಲಿನ ಸದರಿ ಸಂಗತಿಗಳು ಮತ್ತು ಸನ್ನಿವೇಶಗಳಲ್ಲಿ ಕಂಡುಬಂದರೂ, ಮೇಲಿನ ಸದರಿ ಸಂಗತಿಗಳು ಮತ್ತು ಸನ್ನಿವೇಶಗಳಲ್ಲಿ ಅದನ್ನು ಈ ಕೆಳಗೆ ಸೂಚಿಸಲಾದಂತೆ ಮಾರ್ಪಾಡು ಮಾಡುವುದು ಅಗತ್ಯವಾಗಿದೆ.

15. ಈ ಹಿನ್ನೆಲೆಯಲ್ಲಿ, ಅರ್ಜಿಯನ್ನು ಭಾಗಶಃ ಪುರಸ್ಕರಿಸಲಾಗಿದೆ. ದಿನಾಂಕ: 1.2.2019ರ ಆದೇಶದ ಇತರ ಭಾಗವನ್ನು ಸ್ಥಿರೀಕರಿಸಲಾಗಿದೆ ಮತ್ತು ಅಧೀನ ನ್ಯಾಯಾಲಯದ ಷರತ್ತಿನ ಈಡೇರಿಕೆಗೆ ವಾಹನದ ದುಪ್ಪಟ್ಟು ಮೌಲ್ಯದ ಮೊತ್ತವನ್ನು ನವೀಕರಿಸಬಹುದಾದ ಬ್ಯಾಂಕ್ ಖಾತರಿಯ ರೂಪದಲ್ಲಿ ಭದ್ರತೆಯನ್ನು ಒದಗಿಸಲು

ವಾಹನದ ಬಿಡುಗಡೆಗಾಗಿ ವಿಧಿಸಿದ ಷರತ್ತನ್ನು ಮಾರ್ಪಡಿಸಲಾಗಿದೆ ಮತ್ತು ಅಧಿವಿಚಾರಣಾ ನ್ಯಾಯಾಲಯವು ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಅರ್ಜಿದಾರ ಆರ್.ಸಿ. ಮಾಲೀಕ ಪರವಾಗಿ ನೋಂದಣಿ ಸಂಖ್ಯೆ: ಕೆಎ 19 ಎಬಿ.0011 ಹೊಂದಿರುವ ವಾಹನವನ್ನು ಬಿಡುಗಡೆಗೊಳಿಸಲು ನಿರ್ದೇಶಿಸಿದೆ:

i) ಅರ್ಜಿದಾರ–ಆರ್‌ಸಿ ಮಾಲೀಕನು ಅಧಿಕಾರ ವ್ಯಾಪ್ತಿಯ ಅಧಿವಿಚಾರಣಾ ನ್ಯಾಯಾಲಯದ ಷರತ್ತುಗಳ ಪಾಲನೆಗೆ ಸಮಾನ ಮೊತ್ತಕ್ಕಾಗಿ ಎರಡು ಜಾಮೀನುದಾರರೊಂದಿಗೆ ವಾಹನದ ಮೌಲ್ಯಕ್ಕಾಗಿ ನಷ್ಟಭರ್ತಿ ಭದ್ರತಾ ಪತ್ರವನ್ನು (ಬಾಂಡ್) ಒದಗಿಸತಕ್ಕದ್ದು.

ii) ಅಧಿವಿಚಾರಣೆಯ ಕಾಲಾವಧಿಯಲ್ಲಿ ವಾಹನದ ಗುರುತಿಸುವಿಕೆಯ ಬಗ್ಗೆ ತಾನು ಯಾವುದೇ ತಕರಾರು ಮಾಡುವುದಿಲ್ಲವೆಂದು ಮತ್ತು ಸದರಿ ವಾಹನದ ಛಾಯಾಚಿತ್ರಗಳನ್ನು ತೆಗೆಯುವುದಕ್ಕೆ ಯಾವುದೇ ತಕರಾರು ಮಾಡುವುದಿಲ್ಲವೆಂದು ಮತ್ತು ನ್ಯಾಯಾಲಯದ ಮುಂದೆ ವಾಹನವನ್ನು ಹಾಜರುಪಡಿಸುವಂತೆ ಅಗತ್ಯಪಡಿಸಿದಾಗಲೆಲ್ಲಾ ಅದನ್ನು ಹಾಜರುಪಡಿಸುತ್ತೇನೆಂದು ಘೋಷಿಸಿ ಅಫಿಡಾವಿಟ್ಟನ್ನು ಸಹ ಸಲ್ಲಿಸತಕ್ಕದ್ದು.

iii) ಎಲ್ಲ ಕೋನಗಳಿಂದ ಸದರಿ ವಾಹನ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವಂತೆ ತನಿಖಾಧಿಕಾರಿಗೆ ನಿರ್ದೇಶಿಸಲಾಗಿದೆ ಮತ್ತು ಅಫಿಡಾವಿಟ್ಟಿನ ರೂಪದಲ್ಲಿ ಮಾಲೀಕನ ಸಮ್ಮತಿಯನ್ನು ಪಡೆದುಕೊಂಡ ನಂತರ, ಅದನ್ನು ಸದರಿ ದಾಖಲೆಗಳ ಭಾಗವಾಗಿ ಪರಿಗಣಿಸುವುದು ಮತ್ತು ಅಧಿಕಾರ ವ್ಯಾಪ್ತಿಯ ಆರ್‌ಟಿಓ ಗೆ ಆರೋಪಿಯ ವಿರುದ್ಧ ಇರುವ ಸದರಿ ಮೊಕದ್ದಮೆ ವಿಲೇಯಾಗುವವರೆಗೆ ಆರೋಪ ಪಟ್ಟಿಯನ್ನು ಇಟ್ಟುಕೊಳ್ಳುವಂತೆ

ಮತ್ತು ಸದರಿ ವಾಹನದ ಮಾಲೀಕತ್ವವನ್ನು ವರ್ಗಾಯಿಸದ ಸೂಚಿಸಬಹುದು.

iv) ಅದೇ ರೀತಿಯ ಅಪರಾಧಗಳಿಗಾಗಿ ಸದರಿ ವಾಹನವನ್ನು ಮಾಲೀಕನು ಬಳಕೆ ಮಾಡಬಾರದು. ಹಾಗೇನಾದರೂ ಪುನರಾವರ್ತಿತವಾಗಿ ಅಂತಹ ಅಪರಾಧಕ್ಕಾಗಿ ಸದರಿ ವಾಹನವನ್ನು ಬಳಕೆ ಮಾಡಿದ್ದಲ್ಲಿ, ಸದರಿ ವಾಹನವನ್ನು ಬಿಡುಗಡೆ ಮಾಡಲಾಗುವುದಿಲ್ಲ.

v) ಇತರ ಷರತ್ತುಗಳಲ್ಲಿ ಯಾವುವೇ ಬದಲಾವಣೆಗಳು ಇರುವುದಿಲ್ಲ.